ಹೋದಾಗ, ತಾಳು. ನಿನ್ನ ಬಿಯರ್ ಕೊಡು ಇಲ್ಲಿ. ನೀನಂತೂ ಅದನ್ನ ಮುಟ್ಟೇ ಇಲ್ಲ. ನಾನಾದರೂ ಕುಡೀತೇನೆ. ನನ್ನ ಪಾಲಿಗೆ ಅದು ಔಷಧ. ತಲೇನೆಲ್ಲ ಕರ್ಪೂರದ ಎಣ್ಣೆ ಹಾಕಿ ತೊಳೆದ ಹಾಗೆ ಇರತದೆ... ಇರಲಿ. ನಿನಗೆ ಹೇಳತಾ ಇದ್ದೆನಲ್ಲ, ನಾನು ಮೊದಲು ಲುವೀನಾಕ್ಕೆ ಹೋದಾಗ ಕತ್ತೆಗಳ ಮೇಲೆ ಹೇರು ತಂದಿದ್ದವನು ಪ್ರಾಣಿಗಳಿಗೆ ಒಂದಿಷ್ಟು ಬಿಡುವು ಕೂಡ ಕೊಡದೆ ವಾಪಸ್ಸು ಹೊರಟುಬಿಟ್ಟ.

'ನಾನು ಹೊರಟೆ' ಅಂದ.

'ತಾಳು. ಪಾಪ ಅವು ಸ್ವಲ್ಪ ಸುಧಾರಿಸಿಕೊಳ್ಳಲಿ' ಅಂದೆ.

'ಇಲ್ಲಿದ್ದರೆ ಇನ್ನೂ ಅಧ್ವಾನ. ಹೊರಟೆ' ಅಂದ.

'ನಮ್ಮನ್ನ ಒಡ್ಡಗಲ್ಲು ಬೆಟ್ಟದ ಹತ್ತಿರ ಬಿಟ್ಟು, ದೆವ್ವ ಕಂಡರೆ ಓಡುವವನ ಹಾಗೆ ದಡ ದಡ ಹೋಗಿಬಿಟ್ಟ.

'ನಾವು, ಅಂದರೆ ನನ್ನ ಹೆಂಡತಿ, ಮತ್ತೆ ಮೂರು ಮಕ್ಕಳು ಖಾಲಿ ಸಂತೆಮಾಳದಲ್ಲಿ ನಿಂತಿದ್ದೆವು. ನಮ್ಮ ಸಂಸಾರದ ಸಾಮಗ್ರಿಯೆಲ್ಲ ನಮ್ಮ ಜೊತೆಯಲ್ಲೇ ಇತ್ತು. ಅಲ್ಲಿ ಬರೀ ಗಾಳಿಯ ಸದ್ದು ಮಾತ್ರ ಕೇಳುತಿತ್ತು.

'ಗಾಳಿಗೆ ಅಡ್ಡವಾಗಿ ಒಂದೇ ಒಂದು ಗಿಡವೂ ಸಸಿಯೂ ಇಲ್ಲದೆ ನಾವು ಗಾಳಿಗೊಡ್ಡಿಕೊಂಡು ನಿಂತಿದ್ದೆವು.

'ನನ್ನ ಹೆಂಡತಿಯನ್ನ ಕೇಳಿದೆ–'ಇದು ಯಾವೂರು ಅಗ್ರೀಪಿನಾ?

'ಅವಳು ಸುಮ್ಮನೆ ಭುಜ ಹಾರಿಸಿದಳು.

'ಎಲ್ಲಾದರೂ ತಿನ್ನುವುದಕ್ಕೆ ಏನಾದರೂ ಸಿಗುತ್ತದೋ, ರಾತ್ರಿ ಉಳಿಯುವುದಕ್ಕೆ ಜಾಗ ಇದೆಯೋ ನೋಡಿಕೊಂಡು ಬರುತೀಯಾ? ನಾನು ಮಕ್ಕಳ ಜೊತೆ ಇಲ್ಲೇ ಇರತೇನೆ, ಅಂದೆ.

ಚಿಕ್ಕ ಮಗುವನ್ನು ಕರಕೊಂಡು ಹೋದಳು. ವಾಪಸ್ಸು ಬರಲೇ ಇಲ್ಲ.

ಸಂಜೆ ಹೊತ್ತಿಗೆ, ಬೆಟ್ಟದ ನೆತ್ತಿಯ ಮೇಲೆ ಮಾತ್ರ ಬಿಸಿಲು ಇದ್ದಾಗ ಅವಳನ್ನು ಹುಡುಕಿಕೊಂಡು ಲುವೀನಾದ ಇಕ್ಕಟ್ಟು ಬೀದಿಗಳಲ್ಲಿ ಹೊರಟೆ. ಕೊನೆಗೆ ಚರ್ಚಿನಲ್ಲಿ ಸಿಕ್ಕಿದಳು. ಖಾಲಿ ಚರ್ಚಿನ ಮಧ್ಯೆ ನೆಲದ ಮೇಲೆ ಕೂತಿದ್ದಳು. ಮಗು ತೊಡೆಯ ಮೇಲೆ ಮಲಗಿ ನಿದ್ದೆ ಹೋಗಿತ್ತು.

'ಇಲ್ಲಿ ಏನು ಮಾಡತಾ ಇದೀಯಾ, ಅಗ್ರೀಪಿನಾ?

'ಪ್ರಾರ್ಥನೆ ಮಾಡತಾ ಇದೀನಿ ಅಂದಳು.

'ಯಾಕೆ, ಅಂದೆ.

'ಸುಮ್ಮನೆ ಭುಜ ಹಾರಿಸಿದಳು.

'ಪ್ರಾರ್ಥನೆ ಮಾಡುವುದಕ್ಕೆ ಅಲ್ಲೇನೂ ಇರಲಿಲ್ಲ. ಖಾಲೀ ಲಟಾರಿ ಕಟ್ಟಡ. ಬಾಗಿಲು ಇರಲಿಲ್ಲ. ಮುರಿದ ಕಿಟಕಿ, ಮುರಿದ ಚಾವಣಿ. ಜರಡಿಯಲ್ಲಿ ಸೋಸಿಕೊಂಡು ಬಂದ ಹಾಗೆ ಗಾಳಿ.

'ಹೋಟೆಲು ಎಲ್ಲಿದೆ?

'ಹೋಟೆಲು ಇಲ್ಲ.

'ಛತ್ರ?

'ಛತ್ರ ಇಲ್ಲ.

'ಯಾರಾದರೂ ಕಣ್ಣಿಗೆ ಬಿದ್ದರಾ? ಇಲ್ಲಿ ಯಾರಾದರೂ ಜನ ಇದಾರಾ?

'ಹೂಂ. ಅಗೋ ಅಲ್ಲಿ. ಎದುರಿಗೆ. ಹೆಂಗಸರು. ಇನ್ನೂ ಇದಾರೆ, ನೋಡು. ಬಾಗಿಲ ಹಿಂದೆ,